**ದಿನಾಂಕಃ 10-01-2023 ರಂದು ಆದ ಮಧ್ಯಂತರ ಅರ್ಜಿ ಸಂಖ್ಯೆ.12 ಮತ್ತು 13 ರ ಆದೇಶಗಳ ಮೇರೆಗೆ ಪಾಟೀ ಸವಾಲಿಗಾಗಿ ಸಾಕ್ಷಿಯನ್ನು ಮರಳಿ ಕರೆಯಲಾಗಿದೆ .**

**ದಿನಾಂಕಃ 13-03-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .**

**ಪಾಟೀ ಸವಾಲು: ಎದುರುದಾರರ ಪರ ವಕೀಲರಾದ ಶ್ರೀ ಕೆ.ಡಿ.ಬಿ.ವಕೀಲರಿಂದಃ**

ನಾನು, ನನ್ನ ತಾಯಿ ಹಾಗು ನನ್ನ ಅಕ್ಕ ರವರು ಓ.ಎಸ್ ನಂ.123/2015 ರ ದಾವೆಯನ್ನು ಬಸಪ್ಪ (1 ನೇ ಎದುರುದಾರ ) ಮತ್ತು ಆತನ ಹೆಂಡತಿ ಲಲಿತಾ (2 ನೇ ಎದುರುದಾರ ) ರವರ ವಿರುದ್ಧ ಸಲ್ಲಿಸಿದ್ದೇವು ಎಂದರೆ ಸರಿ. ಸದರಿ ಬಸಪ್ಪ ನನ್ನ ಅಣ್ಣನಾಗಬೇಕು ಮತ್ತು ಸದರಿ ಲಲಿತಾ ನನ್ನ ಅತ್ತಿ ಆಗಬೇಕು ಎಂದರೆ ಸರಿ. ಸದರಿ ಓ.ಎಸ್ ನಂ.123/2015 ರ ದಾವೆ ದಿಃ 14-03-2017 ರಂದು ನಿಖಾಲೆಯಾಗಿರುತ್ತದೆ ಎಂದರೆ ಸರಿ. ಸದರಿ ತೀರ್ಪಿನ ವಿರುದ್ದ ನನ್ನ ಅಣ್ಣ ಬಸಪ್ಪ ಮತ್ತು ಆತನ ಹಂಡತಿ ಲಲಿತಾ ರವರು ರಾಣೇಬೆನ್ನೂರಿನ ಮಾನ್ಯ 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ R.A No.36/2017 ನ್ನು ದಿಃ 20-04-2017 ರಂದು ಮೇಲ್ಮನವಿ

ಸಲ್ಲಿಸಿದ್ದಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ R.A No.36/2017 ರಲ್ಲಿ ನಾನು( ಗೌರಮ್ಮ) ಮತ್ತು ನನ್ನ ಅಕ್ಕ (ಮಲ್ಲಮ್ಮ) ಗಳೂ ಸಹ ಪಕ್ಷಗಾರರು ಆಗಿದ್ದೇವು ಎಂದರೆ ಸರಿ. ಸದರಿ R.A No.36/2017 ರಲ್ಲಿ ಸದರಿ ಓ.ಎಸ್ ನಂ.123/2015 ರಲ್ಲಿ ತೀರ್ಪನ್ನು ನ್ಯಾಯಾಲಯ ಏತ್ತಿ ಹಿಡಿದಿದೆ ಹಾಗು ನನ್ನ ಅಣ್ಣ ಬಸಪ್ಪ ಮತ್ತು ಆತನ ಹೆಂಡತಿ ಲಲಿತಾ ರವರು ಸಲ್ಲಿಸಿದ ಮೇಲ್ಮನವಿಯನ್ನು ವಜಾಗೊಳಿಸಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ . ಸದರಿ ಮೇಲ್ಮನವಿಯ ತೀರ್ಪಿನ ವಿರುದ್ಧ ಸದರಿ ನನ್ನ ಅಣ್ಣ ಬಸಪ್ಪ ಮತ್ತು ಆತನ ಹೆಂಡತಿ ಲಲಿತಾ ಮತ್ತು ಅವರ ಮಕ್ಕಳು ಮಾನ್ಯ ಉಚ್ಛ ನ್ಯಾಯಾಲಯ , ಧಾರವಾಡ ಪೀಠದಲ್ಲಿ R.S.A ನ್ನು ಸಲ್ಲಿಸಿದ್ದಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ . ಸದರಿ R.S.A ಯ ನೋಟಿಸ್ ನನಗೆ ಜಾರಿಯಾಗಿರುತ್ತವೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
*ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.*